ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಆಯುಕ್ತರು ರವರ ಕಛೇರಿ, ಕೇಂದ್ರ ಕಛೇರಿ ಆವರಣ, ನ.ರಾ.ವೃತ್ತ, ಬೆಂಗಳೂರು-560002.

ಸಂಖ್ಯೆ:ಆಯುಕ್ತರು/ಪಿಆರ್/ /2020-21 ದಿನಾಂಕ:

ರವರಿಗೆ,

ಮಾನ್ಯ ಆಯುಕ್ತರು,
ನಗರ ಭೂ ಸಾರಿಗೆ ನಿರ್ದೇಶನಾಲಯ
ಬೆಂಗಳೂರು.

ಮಾನ್ಯರೇ,

ವಿಷಯ: Permission of free parking facilities and display of signages on church street-reg.

ಉಲ್ಲೇಖ: Commissioner, Directorate of urban land transport letter No: DULT-RSIN0MOIN(TSBD)/1/2020/636, dated: 30.10.2020

******

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಪತ್ರದಲ್ಲಿ ಮಾನ್ಯ ಆಯುಕ್ತರು, ಭೂ ಸಾರಿಗೆ ನಿರ್ದೇಶನಾಲಯ ರವರು ಚರ್ಚ್ ರಸ್ತೆಯಲ್ಲಿ 7-ನವೆಂಬರ್-2020 ರಿಂದ ಫೆಬ್ರವರಿ-2021 ರ ಅಂತ್ಯದವರೆಗೆ ಪ್ರತಿ ಶನಿವಾರ ಬೆಳಗ್ಗೆ 10:00 ಗಂಟೆಯಿಂದ ಭಾನುವಾರ ಮಧ್ಯರಾತ್ರಿ 12:00 ಗಂಟೆಯವರೆಗೆ ಸದರಿ ರಸ್ತೆಯನ್ನು ಸಂಚಾರ ನಿರ್ಬಂಧಿಸಿ ಭೂ ಸಾರಿಗೆ ಇಲಾಖೆಯ ಅಧಿಕಾರಿಗಳು, ಅಂಗಡಿ ಮಾಲೀಕರು ಮತ್ತು ಸ್ಥಳೀಯ ನಿವಾಸಿಗಳ ಸಂದರ್ಶಕರ ವಾಹನಗಳಿಗೆ ಅನುವಾಗುವಂತೆ ಪಾವತಿ ರಹಿತ ನಿಲ್ದಾಣವನ್ನಾಗಿ ನಿರ್ವಹಿಸಲು ಕೋರಿರುತ್ತಾರೆ.

ಅದರಂತೆ ಚರ್ಚ್ ರಸ್ತೆಯಲ್ಲಿನ 20 ಕಾರು ನಿಲ್ದಾಣ (15 ಸೆಂಟ್ ಮಾರ್ಕ್ಸ್ ರಸ್ತೆ-ಮ್ಯೂಸಿಯಂ ರಸ್ತೆ) 5 ಕಾರು ನಿಲ್ದಾಣ ಮ್ಯೂಸಿಯಂ -ಶೋಭ ರಸ್ತೆಯಲ್ಲಿ ಮತ್ತು 15 ದ್ವಿ ಚಕ್ರ ವಾಹನಗಳ ನಿಲ್ದಾಣಕ್ಕೆ ಹಾಗೂ ಸದರಿ ರಸ್ತೆಯಲ್ಲಿನ ರಸ್ತೆ ದೀಪದ ಕಂಬಗಳಿಗೆ Signages ಗಳನ್ನು ಅಳವಡಿಸುವ ಬಗ್ಗೆ ಈ ಕೆಳಕಂಡ ನಿಬಂಧನೆಗಳೊಂದಿಗೆ ಅನುಮೋದನೆ ನೀಡಲಾಗಿದೆ.

1. ಚರ್ಚ್ ರಸ್ತೆಯಲ್ಲಿ ಭೂ ಸಾರಿಗೆ ನಿರ್ದೇಶನಾಲಯ ರವರ ಕೋರಿಕೆಯಂತೆ ದಿನಾಂಕ:07.11.2020 ರಿಂದ 28.02.2021 ರವರೆಗೆ ಪ್ರತಿ ಶನಿವಾರ ಬೆಳಗ್ಗೆ 10:00 ಗಂಟೆಯಿಂದ ಭಾನುವಾರ ಮಧ್ಯರಾತ್ರಿ 12:00 ಗಂಟೆಯವರೆಗೆ 20 ನಾಲ್ಕು ಚಕ್ರ ವಾಹನಗಳಿಗೆ ಮತ್ತು 15 ದ್ವಿ ಚಕ್ರ ವಾಹನಗಳಿಗೆ ಪಾವತಿ ರಹಿತ ವಾಹನ ನಿಲ್ದಾಣಕ್ಕೆ ಅನುಮತಿ ನೀಡಿದೆ.
2. ನಿಲ್ದಾಣದ ಮೇಲ್ವಿಚಾರಣೆಯನ್ನು ಈಗಾಗಲೇ ಉಸ್ತುವಾರಿ ನಿರ್ವಹಿಸುತ್ತಿರುವ (CPS) ರವರು ಪಾವತಿ ರಹಿತವಾಗಿ ನಿರ್ವಹಿಸುವುದು.
3. ನಿರ್ದೇಶಿತ ಸ್ಥಳಗಳಲ್ಲಿ ವಾಹನ ನಿಲ್ಲಿಸಲು ಕ್ರಮ ಕೈಗೊಳ್ಳುವುದು.

4. ಸಂಬಂಧಿಸಿದ ಸಂಚಾರಿ ಪೋಲಿಸ್ ರವರೊಂದಿಗಿನ ಸಹಯೋಗದೊಂದಿಗೆ ನಿರ್ವಹಿಸುವುದು.
5. ವಿದ್ಯುತ್ ಕಂಬಕ್ಕೆ ಅಳವಡಿಸುವ Signage ಗಳು ಜನ ಸಂಚಾರಕ್ಕೆ, ವಾಹನ ಸಂಚಾರಕ್ಕೆ ತೊಂದರೆಯಾಗದಂತೆ ಅಳವಡಿಸುವುದು.
6. Signage ಗಳಲ್ಲಿ ಯಾವುದೇ ವಾಣಿಜ್ಯ ಜಾಹೀರಾತಿಗೆ ಅನುಮತಿ ನಿರ್ಬಂಧಿಸಿದೆ.

ವಂದನೆಗಳೊಂದಿಗೆ,

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಬೆಂಗಳೂರು